## <u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಮೊಳಕಾಲ್ಮೂರು .</u>

### <u>ಸಿ.ಸಿ. ನಂ. 213/2026</u>

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ರಾಜೇಶ | ಸಿ.ಡಬ್ಲ್ಯೂ – 2 |
| ತಂದೆ/ ಗಂಡನ ಹೆಸರು | : | ಲಚಮ ನಾಯಕ | ಪಿ.ಡಬ್ಲ್ಯೂ – 2 |
| ವಯಸ್ಸು | : | 41 ವರ್ಷ | |
| ಉದ್ಯೋಗ | : | ಟೈಲರಿಂಗ್ | |
| ವಾಸಸ್ಥಳ | : | ತಳಕು ಲಂಬಾಣಿ ಹಟ್ಟಿ | ದಿಃ 02-06-2026. |

### <u>ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ</u>

ಸಾಕ್ಷಿಗೆ ನಿಪಿ 2 ರಿಂದ 4 ನ್ನು ತೋರಿಸಲಾಗಿ ಅದರಲ್ಲಿನ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಗಳನ್ನು ಕ್ರಮವಾಗಿ ನಿಪಿ 2(ಬಿ), 3(ಬಿ) ಮತ್ತು 4(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ದಿ: 11.01.2026 ರಂದು ನಮ್ಮ ಅಂಗಡಿಯ ಪಕ್ಕದಲ್ಲಿ ಕಳ್ಳತನವಾಗಿದ್ದರಿಂದ ಮಹಜರ್ ಗೆ ಹಾಜರಾಗಲು ನನಗೆ ಹಾಗೂ ಚಾಸಾ 3 ರವರಿಗೆ ನೋಟಿಸ್ ನ್ನು ನೀಡಿರುತ್ತಾರೆ. ಬೆಳಿಗ್ಗೆ 9.15 ರಿಂದ 10.15 ರವರೆಗೆ ಚಾಸಾ 1 ರವರ ಅಂಗಡಿಯಾದ ಸ್ನೇಹ ಜೇವಿ ಫ್ರಾಮಿಜನ್ ಸ್ಟೋರ್ ನಲ್ಲಿ ಮಹಜರ್ ಕ್ರಮ ಜರುಗಿಸಿ, 2 ಬೀಗಗಳನ್ನು ವಶಪಡಿಸಿಕೊಂಡಿರುತ್ತಾರೆ. ಪೊಲೀಸರು ಮಹಜರ್ ನ್ನು ನಮ್ಮ ಸಮಕ್ಷಮದಲ್ಲಿ ಬರೆದು ಓದಿ ತಿಳಿಸಿ ಸಹಿ ಪಡೆದಿರುತ್ತಾರೆ. ಸಾಕ್ಷಿಯು ಮು.ಮಾ 1 ಮತ್ತು 2 ನ್ನು ನೋಡಿ ಚಾಸಾ 1 ರವರ ಅಂಗಡಿಯಲ್ಲಿ ಜಪ್ತು ಪಡಿಸಿಕೊಂಡ ಬೀಗಗಳು ಎಂದು ಗುರುತಿಸಿರುತ್ತಾರೆ.

ನಂತರ ಚಾಸಾ 6 ರವರಿಗೆ ಸೇರಿದ ಸಿಂಗಧೂರು ಚೌಡೇಶ್ವರಿ ಗೊಬ್ಬರದ ಅಂಗಡಿಗೆ ಹೋಗಿದ್ದು, ಅಲ್ಲಿ ಬೆಳಿಗ್ಗೆ 11.15 ರಿಂದ 12.15 ಗಂಟೆವರೆಗೆ ಮಹಜರ್ ಕ್ರಮ ಜರುಗಿಸಿ, ಒಡೆದ 2 ಬೀಗಗಳನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ನಂತರ ಅಲ್ಲಿಂದ ಚಾಸಾ 7 ರವರಿಗೆ ಸೇರಿದ ಶಿವಸಂಕಲ್ಪ ಎಲೆಕ್ಟ್ರಾನಿಕ್ಸ್ ಅಂಗಡಿಯಲ್ಲಿ ಬೆಳಿಗ್ಗೆ 11.45 ರಿಂದ 12.45 ರವರೆಗೆ ಮಹಜರ್ ಕ್ರಮ ಜರುಗಿಸಿ

ಒಂದು ಬೀಗ  ಮತ್ತು ಹಾರೆಯನ್ನು ಜಪ್ತು ಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಮು.ಮಾ. 3 ಮತ್ತು 4 ನ್ನು ನೋಡಿ ಸಿಂಗಧೂರು ಚೌಡೇಶ್ವರಿ  ಗೊಬ್ಬರದ ಅಂಗಡಿಯಲ್ಲಿ ಜಪ್ತು ಪಡಿಸಿಕೊಂಡ ಬೀಗಗಳು ಎಂದು ಗುರುತಿಸಿರುತ್ತಾರೆ.  ಸಾಕ್ಷಿಯು ಮು.ಮಾ. 5 ಮತ್ತು 6 ನ್ನು ನೋಡಿಶಿವಸಂಕಲ್ಪ ಎಲೆಕ್ಟ್ರಾನಿಕ್ಸ್ ಅಂಗಡಿಯಲ್ಲಿ  ಜಪ್ತು ಪಡಿಸಿಕೊಂಡ ಬೀಗ ಮತ್ತು ಹಾರೆಗಳು ಎಂದು ಗುರುತಿಸಿರುತ್ತಾರೆ. ಸಾಕ್ಷಿಯು ನಿಪಿ-5 ರಿಂದ 10 ವರ ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಭಾವಚಿತ್ರಗಳನ್ನು ಜಪ್ತು ಪಡಿಸಿಕೊಳ್ಳುವಾಗ ತೆಗೆಯಲಾಗಿರುತ್ತದೆ. ಚಾಸಾ 1 ರವರು ಮಹಜರ್ ಕ್ರಮ ಜರುಗಿಸಲು ಸ್ಥಳಗಳನ್ನು ತೋರಿಸಿರುತ್ತಾರೆ. ಮಹಜರ್ ಕ್ರಮ ಜರುಗಿಸುವಾಗ ಪೊಲಿಸರು, ಚಾಸಾ 1, 6, 7 ನಾನು ಮತ್ತು ಚಾಸಾ 3 ರವರು ಹಾಜರಿದ್ದರು.

**ಪಾಟೀ ಸವಾಲು:  ಎಲ್.ಎ.ಡಿ.ಸಿ. ಆರೋಪಿ ಪರ ವಕೀಲರಿಂದ .**

ನಾನು 10 ನೇ ತರಗತಿವರೆಗೂ ಓದಿಕೊಂಡಿರುತ್ತೇನೆ. ದಿ: 11.01.2026 ರಂದು ನಾನು ಅಂಗಡಿಯಲ್ಲಿದ್ದಾಗ ಪೊಲೀಸರು ನೋಟಿಸ್ ನೀಡಿದ್ದರು, ಸದರಿ ಪೊಲೀಸರ ಹೆಸರನ್ನು ಹೇಳಲು ಆಗುವುದಿಲ್ಲ. ಪೊಲೀಸರು ಬೆಳಿಗ್ಗೆ 9.00 ಗಂಟೆಗೆ ನನಗೆ ನೋಟಿಸ್ ನೀಡಿರುತ್ತಾರೆ. ಚಾಸಾ 6 ರವರ ಅಂಗಡಿಗೆ ಬೆಳಿಗ್ಗೆ 10.45 ಕ್ಕೆ ಹೋಗಿರುತ್ತೇವೆ. ಚಾಸಾ-7 ರವರ ಅಂಗಡಿಗೆ ಬೆಳಿಗ್ಗೆ 11.45 ಕ್ಕೆ ಹೋಗಿರುತ್ತೇವೆ. ಚಾಸಾ 1 ರವರ ಅಂಗಡಿಗೆ ಬೆಳಿಗ್ಗೆ 9.15 ಕ್ಕೆ ಹೋಗಿರುತ್ತೇವೆ. ಅಂಗಡಿ ಹತ್ತಿರ ನಾವೇ ಬಂದಿರುತ್ತೇವೆ. ನಿಪಿ-2 ರಿಂದ 4 ನ್ನು  ಪೊಲೀಸರು ಚಾಸಾ 1, 6 ಮತ್ತು 7 ರವರ ಅಂಗಡಿಗಳಲ್ಲಿ ಬರೆದಿದ್ದು, ಪ್ರತಿ ದಾಖಲೆಯನ್ನು ಬರೆಯಲು ಸುಮಾರು 30 ನಿಮಿಷ ಸಮಯ ತೆಗೆದುಕೊಂಡಿರುತ್ತಾರೆ. ನಿಪಿ-2 ರಿಂದ 4 ರಲ್ಲಿ ಏನು ಬರೆದಿದೆ ಎಂದು ನನಗೆ ಹೇಳಲು ಆಗುತ್ತದೆ. ನಿಪಿ 2 ರಿಂದ 4 ರಲ್ಲಿ ಬೀಗ ಒಡೆದ ಬಗ್ಗೆ ಹಾಗೂ ಕಳ್ಳತನ ಆಗಿರುವ ಬಗ್ಗೆ ನಮೂದಿಸಲಾಗಿರುತ್ತದೆ. ನಿಪಿ 2 ರಿಂದ 4 ನ್ನು ಒಬ್ಬರೇ ಪೊಲೀಸರು ನನ್ನ ಸಮಕ್ಷಮ ಬರೆದಿರುತ್ತಾರೆ. ಸದರಿಯವರ ಹೆಸರನ್ನು ಹೇಳಲು ಆಗುವುದಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ಠಾಣೆಯಲ್ಲಿ ಸಹಿ ಮಾಡಿರುವುದಿಲ್ಲ. ಮಹಜರ್ ಸಮಯದಲ್ಲಿ ಸುಮಾರು 7-8 ಜನ ಸೇರಿದ್ದರು. ಪೊಲೀಸರ ಕೋರಿಕೆಯ ಮೇರೆಗೆ ನಿಪಿ-2 ರಿಂದ 4 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಸಮಕ್ಷಮ ಮಹಜರ್ ಕ್ರಮ ಜರುಗಿಸಿದ್ದಕ್ಕೆ ಸಹಿ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಮು.ಮಾ. 1 ರಿಂದ 5 ಯಾರ ಅಂಗಡಿಗಳಿಗೆ ಸೇರಿರುತ್ತದೆ ಎಂದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ ಎಂದರೆ ಸರಿಯಲ್ಲ.

ಮು.ಮಾ. 1 ಮತ್ತು 2 ಚಾಸಾ 1 ರವರ ಅಂಗಡಿಗೆ ಸೇರಿದ್ದು, ಮು.ಮಾ. 3 ಮತ್ತು 4 ಚಾಸಾ 6 ರವರ ಅಂಗಡಿಗೆ ಸೇರಿರುತ್ತವೆ ಹಾಗೂ ಮು.ಮಾ. 5 ಚಾಸಾ 7 ರವರ ಅಂಗಡಿಗೆ ಸೇರಿರುತ್ತದೆ. ಮು.ಮಾ. 6 ಸಾಮಾನ್ಯವಾಗಿ ಎಲ್ಲಾ ರೈತರ ಮನೆಯಲ್ಲಿ ಇರುತ್ತದೆ ಎಂದರೆ ಸರಿ. ನಾನು ಮಹಜರ್ ಗೆ ಹೋಗದೇ ಇದ್ದರೂ ಠಾಣೆಯಲ್ಲಿ ನಿಪಿ 2 ರಿಂದ 4 ಕ್ಕೆ ಸಹಿ ಮಾಡಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 2 ರಿಂದ 4 ನ್ನು ಬೇರೆ ಬೇರೆ ಪೊಲಿಸರು ಬರೆದಿದ್ದರೂ ಒಬ್ಬರೇ ಪೊಲಿಸರು ಬರೆದಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ಪೊಲಿಸರು ನಮಗೆ ಸಿ.ಸಿ. ಕ್ಯಾಮೆರಾ ದೃಶ್ಯಾವಗಳಿಗಳನ್ನು ತೋರಿಸಿರುವುದಿಲ್ಲ, ಸಿ.ಸಿ. ಟಿ.ವಿ.ಯನ್ನು ಚಾಸಾ 1, 6 ಮತ್ತು 7 ರವರ ಮೂರು ಅಂಗಡಿಗಳಲ್ಲಿ ಅಳವಡಿಸಲಾಗಿರುತ್ತದೆ. ಪೊಲಿಸರು ನನ್ನ ಸಮಕ್ಷಮದಲ್ಲಿ ಸಿ.ಸಿ. ಕ್ಯಾಮೆರಾವನ್ನು ಜಪ್ತು ಪಡಿಸಿಕೊಂಡಿರುವುದಿಲ್ಲ. ನಾನು ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 5 ರಿಂದ 10 ರ ಭಾವಚಿತ್ರಗಳನ್ನು ಪೊಲಿಸರ ಕೋರಿಕೆಯ ಮೇರೆಗೆ ತೆಗೆಯಿಸಲಾಗಿರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೇ.ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಮೊಳಕಾಲ್ಮೂರು